ದಿನಾಂಕಃ 08.12.2025 ರಂದು ಪಿಡಬ್ಲ್ಯೂ-1 ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** 2 ನೇ ಎದುರುದಾರರ ಪರವಾಗಿ ಶ್ರೀ ಕೆ ಎಮ್ ಪಿ ವಕೀಲರಿಂದಃ

2. ಸ್ವಾಧೀನಪಡಿಸಿಕೊಂಡ ನಮ್ಮ ಜಮೀನು ಒಣ ಜಮೀನು ಎಂದರೆ ಸರಿ. ಒಣ ಜಮೀನು ಆಗಿದ್ದರಿಂದ 600 ನೀಲಗಿರಿ ಗಿಡಗಳನ್ನು ಬೆಳೆಯಲು ಸಾಧ್ಯವಿಲ್ಲವೆಂದರೆ ನಮಗೆ ಸೇರಿದ ಬೇರೆ ಸರ್ವೆ ನಂ. 9/1 ರ ಜಮೀನಿನ ನೀರು ತೆಗೆದುಕೊಳ್ಳುತ್ತಿದ್ದೆವು. ಸರ್ವೆ ನಂ. 9/1 ರ ಜಮೀನಿನಲ್ಲಿ ಕೊಳವೆ ಬಾವಿ ಇರುತ್ತದೆಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲವೆಂದರೆ ಸರಿ. ಆದ್ದರಿಂದ ಸರ್ವೆ ನಂ. 9/1 ರ ಜಮೀನಿನಿಂದ ನೀರು ತೆಗೆದುಕೊಳ್ಳುತ್ತಿದ್ದೆವು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 1 ಎಕರೆ 20 ಗುಂಟೆ ಜಮೀನಿನಲ್ಲಿ 600 ನೀಲಗಿರಿ ಗಿಡಗಳನ್ನು ಬೆಳೆಯಲು ಸಾಧ್ಯವಿಲ್ಲವೆಂದರೆ ಸರಿಯಲ್ಲ. ಸದರಿ ನೀಲಗಿರಿ ಗಿಡಗಳನ್ನು ಕಡಿದ ನಂತರ ಕಡಿದ ಮರಗಳನ್ನು ನಾವೇ ತೆಗೆದುಕೊಂಡು ಹೋಗಿರುತ್ತೇವೆಂದರೆ ಸರಿಯಲ್ಲ. ಇಲಾಖೆಯವರು ತೆಗೆದುಕೊಂಡು ಹೋಗಿರುತ್ತಾರೆ. ಇಲಾಖೆಯವರು ತೆಗೆದುಕೊಂಡು ಹೋಗಿರುತ್ತಾರೆಂಬ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲವೆಂದರೆ ಸರಿಯಲ್ಲ.

3. ನೀಲಗಿರಿ ಗಿಡಗಳು 2.8 ಮೀಟರ ಅಗಲ ಇತ್ತು, 8 ರಿಂದ 9 ಮೀಟರ ಉದ್ದ ಇತ್ತು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನೀಲಗಿರಿ ಗಿಡಕ್ಕೆ ವಾರ್ಷಿಕವಾಗಿ ಯಾವುದೇ ಆದಾಯ ಬರುವುದಿಲ್ಲವೆಂದರೆ ಸರಿಯಲ್ಲ. 1 ಮರಕ್ಕೆ ರೂ. 80 ಸಾವಿರ ಕಿಮ್ಮತ್ತು ಆಗುತ್ತಿತ್ತು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸದರಿ ನೀಲಗಿರಿ ಗಿಡಗಳನ್ನು ಯಾವುದೇ ಪ್ಯಾಕ್ಟರಿಗೆ ಹಾಕಿದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನೀಲಗಿರಿ ಗಿಡಗಳ ಮೌಲ್ಯಮಾಪನ ಮಾಡಿರಸಿರುವುದಿಲ್ಲ, ಆದರೆ 15 ರಿಂದ 20 ವರ್ಷದ ಮರಗಳಿದ್ದವು.

4. ನಿಪಿ-6 ರ ಪ್ರಕಾರ ಹೂಲಗೇರಿ ಗ್ರಾಮದ ಸರ್ವೆ ನಂ.161/1 ರ 1 ಎಕರೆ ಜಮೀನು ರೂ. 2 ಲಕ್ಷ 50 ಸಾವಿರಕ್ಕೆ ಮಾರಾಟ ಆಗಿರುತ್ತದೆಂದರೆ ಸರಿ. ಆದರೆ ಅದರ ಮಾರುಕಟ್ಟೆ ಬೆಲೆ ರೂ. 3 ಲಕ್ಷ 80 ಸಾವಿರ ಇರುತ್ತದೆ. ನಾನು ಹಾಜರುಪಡಿಸಿದ ಕ್ರಯಪತ್ರಗಳ ನಿವೇಶನಗಳು ನಮ್ಮ ಜಮೀನಿನಿಂದ 3-4 ಕಿಲೋಮೀಟರ ದೂರದಲ್ಲಿರುತ್ತದೆಂದರೆ ಸರಿಯಲ್ಲ. 2 ರಿಂದ 3 ಕಿಲೋಮೀಟರ ದೂರದಲ್ಲಿರುತ್ತವೆ. ನಾನು ಹಾಜರುಪಡಿಸಿದ ಕ್ರಯಪತ್ರಗಳ ಜಮೀನಿನ ಗುಣದರ್ಮ ಮತ್ತು ನಮ್ಮ ಜಮೀನಿನ ಗುಣದರ್ಮ ಬೇರೆ ಬೇರೆ ಇರುತ್ತದೆಂದರೆ ಸರಿಯಲ್ಲ. ನಾನು

ಹಾಜರುಪಡಿಸಿದ ನಿಪಿ-6 ಮತ್ತು ನಿಪಿ-7 ರ ಕ್ರಯಪತ್ರಗಳು ನಮ್ಮ ಜಮೀನಿಗೆ ಅನ್ವಯಿಸುವುದಿಲ್ಲವೆಂದರೆ ಸರಿಯಲ್ಲ. ನಿಪಿ-5 ಪರಿಷ್ಕೃತ ದರಪಟ್ಟಿಯು ಕಲಂ.11 ರ ಅದಿಸೂಚನೆಯ ನಂತರದ ದರಪಟ್ಟಿ ಆಗಿದ್ದರಿಂದ ಆ ಪ್ರಕಾರವಾಗಿ ದರ ನೀಡಲು ನಮ್ಮ ಜಮೀನಿಗೆ ಅನ್ವಯಿಸುವುದಿಲ್ಲವೆಂದರೆ ಸರಿಯಲ್ಲ. ಎಸ್ ಎಲ್ ಎ ಓದವರು ನಮ್ಮ ಜಮೀನಿಗೆ ಬೇಟಿ ಕೊಟ್ಟಿರುತ್ತಾರೆಂದರೆ ಸರಿ. ಸದರಿಯವರು ಬೇಟಿಯ ಸಮಯದಲ್ಲಿ ಸ್ಥಾನಿಕ ಚೌಕಾಸಿ ಮಾಡಿ ನಮ್ಮ ಜಮೀನಿಗೆ ಯೋಗ್ಯ ಪರಿಹಾರ ನೀಡಿರುತ್ತಾರೆಂದರೆ ಸರಿಯಲ್ಲ. ಕಡಿಮೆ ನೀಡಿರುತ್ತಾರೆ. ನಾನು ಹೆಚ್ಚಿನ ಪರಿಹಾರ ಪಡೆಯಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ** 1 ನೇ ಎದುರುದಾರರ ಪರವಾಗಿ ಮೇಲ್ಕಂಡ ಪಾಟೀ ಸವಾಲನ್ನು ಅಂಗೀಕರಿಸಲು ಮಾನ್ಯ ಜಿಲ್ಲಾ ಸರಕಾರಿ ವಕೀಲರು ಕೋರಿರುತ್ತಾರೆ. ಅಂಗೀಕರಿಸಲಾಯಿತು.

ಮರು ವಿಚಾರಣೆ ಇರುವುದಿಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಾಗಲಕೋಟೆ .